# ಸಾಹಿತ್ಯ ದಿಗ್ಗಜರ ಮಧ್ಯೆ ಪ್ರಬಂಧ ಮಂಡಿಸಿದಾಗ..

**ಡಾ.ಸುಜನಾ, ಡಾ.ಜಿ.ಎಸ್.ಶಿವರುದ್ರಪ್ಪ, ಪು.ತಿ.ಕೃಷ್ಣಯ್ಯಂಗಾರ್, ಡಾ. ಜಿ.ಎಸ್.ಎಸ್., ಅರೆಯರ್ ರಾಮ ಶರ್ಮ, ಮುಂತಾದ ಹಿರಿಯ ಸಾಹಿತಿಗಳ ಮುಂದೆ ಪ್ರಬಂಧ ಮಂಡಿಸುವ ಅವಕಾಶ ಸಿಕ್ಕಿದ್ದು ನನ್ನ ಸುಯೋಗ. ವೇದಿಕೆಗೆ ಭಯದಿಂದಲೇ ಹೋಗಿದ್ದರೂ ಧೈರ್ಯವಾಗಿ ಪ್ರಬಂಧ ಮಂಡಿಸಿ ಮರಳಿ ಬರುವಾಗ ಈ ದಿಗ್ಗಜರು ಮೆಚ್ಚುಗೆ ವ್ಯಕ್ತಪಡಿಸಿದ್ದು ನನಗೆ ಅತೀವ ಸಂತೋಷವಾಗಿತ್ತು. ಈ ನೆನಪು ಎಂದೆಂದಿಗೂ ಆಪ್ಯಾಯಮಾನ!**

■ **ಚಿತ್ರ-ಬರಹ: ಮುಕುಂದ ಪುರೋಹಿತ್**

ಹಿರಿಯ ಕವಿ, ಸಾಹಿತಿಗಳೊಂದಿಗೆ ಒಡನಾಟದ ನೆನಪುಗಳು ಯಾವತ್ತೂ ಮನದಾಳದಿಂದ ಮಾಸಿಹೋಗಲ್ಲ. ಅದು ಎಂದಿಗೂ ಸಿಹಿ ಸಿಹಿ ನೆನಪಾಗಿಯೇ ಉಳಿಯುತ್ತದೆ. ಹಿರಿಯ ಕವಿಗಳ ಬಗ್ಗೆ ಆಯೋಜಿಸುವ ಕಾರ್ಯಕ್ರಮಗಳೂ ಹಾಗೆ. ಅದು ನೆನಪಿನ ಬುತ್ತಿಯಾಗಿಯೇ ಸದಾ ಪುಳಕ ನೀಡುತ್ತಿರುತ್ತದೆ.




ನವೋದಯ ಸಾಹಿತ್ಯದ ಹಿರಿಯ ಕವಿ ಪದ್ಮಶ್ರೀ ಪು.ತಿ.ನರಸಿಂಹಾಚಾರ್ ಅವರು ವೈಕುಂಠವಾಸಿಗಳಾಗಿ ಒಂದು ವರ್ಷವಾಗಿತ್ತು. ಆ ವರ್ಷ(1999) ಮೇಲುಕೋಟೆಯಲ್ಲಿ ಅವರು ಜನಿಸಿದ 'ಕವಿ ಮನೆ'ಯಲ್ಲಿ ಅವರ ಬಗ್ಗೆ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು. ಈ ಮೂಲಕ ಅವರನ್ನು ಸ್ಮರಿಸಲು ಸ್ಥಳೀಯರಾದ ಸ್ಥಾನೀಕಂ ಸಂಪತ್‌ಕುಮಾರನ್, ಫೋಟೊ ರಾಮು ಗೆಳೆಯರು ಅದನ್ನು ಊರಿನಲ್ಲಿರುವ ಜಾಗತಿಕ ಸೇವಾದಳ 'ಸಂರಕ್ಷಣಾ' ಸಂಸ್ಥೆಯ ಮೂಲಕ ಕಾರ್ಯಕ್ರಮ ಹಮ್ಮಿಕೊಳ್ಳಲು ಆಶಿಸಿದರು. ಈ ಸಂದರ್ಭದಲ್ಲಿ ಕಲಾವಿದ ಬಿ.ಕೆ.ಶ್ರೀನಿವಾಸ ವರ್ಮ ಅವರ 'ಕಾವ್ಯಚಿತ್ರ' ಕಾರ್ಯಕ್ರಮ ಏರ್ಪಡಿಸಲು ಬಯಸಿ ನನ್ನ ಸಹಾಯ ಕೋರಿದರು. ಸಂಪತ್‌ಕುಮಾರನ್ ಅವರ ಅಭಿಲಾಷೆಯಂತೆ ವರ್ಮ ಅವರನ್ನು ಕಾವ್ಯಚಿತ್ರ ನಡೆಸಿಕೊಡಲು ಒಪ್ಪಿಸಿದೆ.

ಒಂದು ದಿನದ ವಿಚಾರ ಸಂಕಿರಣದಲ್ಲಿ ಡಾ. ಜಿ.ಎಸ್.ಶಿವರುದ್ರಪ್ಪ, ಡಾ. ಸುಜನಾ, ಪು.ತಿ.ಕೃಷ್ಣಯ್ಯಂಗಾರ್, ತಿರು ಅಯ್ಯಂಗಾರ್, ವಿದ್ವಾನ್ ಎಂ.ವಿ.ವರದರಾಜನ್, ಖಾದ್ರಿ ಅಚ್ಯುತನ್, ನಾಗರತ್ನ ಹೆಮ್ಮಿಗೆ, ವಿ.ವೆಂಕಟರಾಮೇ ಗೌಡ ಅವರು ಭಾಗವಹಿಸಲಿದ್ದು, ಆ ಸಂದರ್ಭದಲ್ಲಿ 'ಪು.ತಿ.ನ. ಅವರ ಕೃತಿಗಳ ವಿಮರ್ಶೆ, ಕವನಗಳು, ಗೀತ ನಾಟಕಗಳು, ವೇದಾಂತ ಗ್ರಂಥಗಳ ಬಗ್ಗೆ ಕೆಲವರು ಮಾತನಾಡುತ್ತಾರೆ. ನೀವು ಪು.ತಿ.ನ. ಪ್ರಬಂಧಗಳ ಕುರಿತು ಮಾತನಾಡಿ' ಎಂದರು ಸಂಘಟಕರು. ನನಗೆ ಅದು ಪ್ರೀತಿಯ ಕೆಲಸವಾದ್ದರಿಂದ ನಾನದಕ್ಕೆ ಕೂಡಲೇ ಸಮ್ಮತಿಸಿದೆ.

ಅಕ್ಟೋಬರ್ 13,1999 ಪು.ತಿ.ನ. ಅವರ ವಾರ್ಷಿಕ ಪುಣ್ಯತಿಥಿ. ಅವರ ಸ್ಮರಣೆಗಾಗಿ ಅಭಿಮಾನಿಗಳು ಸೇರಿದ್ದರು. ದುರಸ್ತಿಯಾಗುತ್ತಿದ್ದ 'ಕವಿ ಮನೆ'ಗೆ ನಮಸ್ಕರಿಸಿ, ಎಲ್ಲರೂ ಬಾಂಗೂರು ಛತ್ರ ಸೇರಿದೆವು. ಅಲ್ಲಿ ಸಮಾರಂಭದ ವೇದಿಕೆ ಅಲಂಕೃತವಾಗಿತ್ತು. ಡಾ.ಸುಜನಾ, ಪು.ತಿ.ಕೃಷ್ಣಯ್ಯಂಗಾರ್, ಡಾ. ಜಿ.ಎಸ್.ಎಸ್., ಅರೆಯರ್ ರಾಮ ಶರ್ಮ ಹಿರಿಯರೆಲ್ಲ ವೇದಿಕೆ ಮೇಲೆ ಕುಳಿತರು. ಶ್ರೀಹರಿ ಚರಿತೆ ಕುರಿತು ವಿದ್ವಾನ್ ಎಂ.ವಿ.ವರದರಾಜನ್, ಪು.ತಿ.ನ. ಕವನದ ಬಗ್ಗೆ  ನಾಗರತ್ನ ಹೆಮ್ಮಿಗೆ, ಗೀತ ನಾಟಕ ಕುರಿತು ವಿ.ವೆಂಕಟರಾಮೇ ಗೌಡ ಈ ಎಲ್ಲ ಉಪನ್ಯಾಸಕರು ಒಬ್ಬೊಬ್ಬರಾಗಿ ವೇದಿಕೆ ಹತ್ತಿದರು. ವಿದ್ವಜ್ಜನರ ಸಭೆಯಲ್ಲಿ ಮಾತನಾಡಲು ನನಗೆ ಸ್ವಲ್ಪ ಭಯವೆನಿಸಿತು. ನಾನು ವೇದಿಕೆಯ ಯಾವ ಮೂಲೆಯಲ್ಲಿ ಕುಳಿತುಕೊಳ್ಳಲೆಂದು ಯೋಚಿಸುತ್ತಿರುವಾಗ ಡಾ.ಜಿ.ಎಸ್.ಎಸ್. ಅವರು ನನ್ನ ಜುಬ್ಬ ಎಳೆದು 'ಬನ್ನಿ, ಇಲ್ಲೇ ಕುಳಿತುಕೊಳ್ಳಿ' ಎಂದರು. ಈ ಸಲುಗೆಯನ್ನು ನಾನು ಪು.ತಿ.ನ. ಬಳಿ ಇದ್ದಾಗ ಕೆಲವರ ಪ್ರೀತಿ ವಿಶ್ವಾಸದಿಂದ ಗಳಿಸಿದ್ದೆ.  ಹಾಗಾಗಿ ಹಿಂದಿರುಗಿ ನೋಡಿ, ಹಿರಿಯರಿಗೆ ಸರಿಸಮಾನವಾಗಿ ಕುಳಿತುಕೊಳ್ಳಬಾರದೆಂದು ಸ್ವಲ್ಪ ಕುರ್ಚಿ ಹಿಂದಕ್ಕೆ ಸರಿಸಿ ಕುಳಿತೆ. ಸ್ವಲ್ಪ ದೂರದಲ್ಲಿದ್ದ  ಪ್ರೊ. ಸುಜನಾ ಕಣ್ಸನ್ನೆಯಲ್ಲೇ ನನ್ನನ್ನು ಆಶೀರ್ವದಿಸಿದರು. ನನ್ನ ಸಾಹಿತ್ಯಕ್ಕೆ ಇಂಬು ನೀಡಿದ ತಿರು ಖಾದ್ರಿ ಅಚ್ಯುತನ್ ಬಾರದಿರುವುದು ನನಗೆ ನಿರಾಸೆಯಾಗಿತ್ತು.

ಕಾರ್ಯಕ್ರಮ ಪ್ರಾರಂಭವಾಯಿತು. ಎಲ್ಲರೂ ಅದ್ಭುತವಾಗಿ ಮಾತನಾಡಿದರು. ಕೃತಿ ವಿಮರ್ಶೆ, ಕವನ ವಾಚನ ಎಲ್ಲ ನಡೆದವು. ನಂತರ 'ಪು.ತಿ.ನ. ಪ್ರಬಂಧ' ಮಂಡನೆಯ ನನ್ನ ಸರದಿ. ಹಿರಿಯರಿಗೆ ನಮಸ್ಕರಿಸಿ, ಭಯದಿಂದಲೇ ಮೈಕ್ ಮುಂದೆ ನಿಂತೆ. ಕೈಕಾಲುಗಳು ನಡುಗುತ್ತಿದ್ದವು. ಭಯದಿಂದ ಹೋದ ನನಗೆ ಎಲ್ಲಿಂದ ಧೈರ್ಯ ಬಂತೋ ಕಾಣೆ! ನಿರರ್ಗಳವಾಗಿ ಪ್ರಬಂಧ ಮಂಡಿಸಲಾರಂಭಿಸಿದೆ. ಜಿ.ಎಸ್.ಎಸ್. ಮತ್ತು ಸುಜನಾ ಇಬ್ಬರೂ ನನ್ನನ್ನೇ ತದೇಕಚಿತ್ತದಿಂದ ನೋಡಿ ಆಲಿಸುತ್ತಿದ್ದರು. ಆಗ ಸ್ವಲ್ಪ ಭಯವೂ ಆಯಿತು. ಪ್ರಬಂಧ ಮಂಡಿಸಿ, ಹಿಂದಿರುಗಿ ಹೋದಾಕ್ಷಣ ಸುಜನಾ ಅವರು ನನಗೆ  ಹಸ್ತಲಾಘವ ನೀಡಿ 'ಚೆನ್ನಿತ್ತು' ಎಂದರು.

ಜಿ.ಎಸ್.ಎಸ್. ಅವರು 'ನನಗೆ ಗೊತ್ತೇ ಇರ್ಲಿಲ್ಲರೀ ಹೀಗೆ ಮಾತಾಡ್ತೀರಿ ಅಂತ, ಚೆನ್ನಾಗಿ ಪ್ರಬಂಧ ಮಂಡಿಸಿದ್ದೀರಿ' ಎಂದರು. ಇಬ್ಬರು ದಿಗ್ಗಜರ ಮೆಚ್ಚುಗೆಯ ಮಾತು ನನಗೆ ಧೈರ್ಯ ತುಂಬಿ ಸಮಾಧಾನವೆನಿಸಿತು. ಕವಿ ದೊಡ್ಡಪ್ಪನವರಿಗೆ ನುಡಿ ನಮನ ಸಲ್ಲಿಸಿದೆ ಎಂಬ ತೃಪ್ತಿಯಾಗಿ, ನನ್ನ ಸಾಹಿತ್ಯ ಜೀವನ ಸಾರ್ಥಕವಾಯಿತು ಎನಿಸಿತು. ನಂತರ ಬಿ.ಕೆ.ಎಸ್.ವರ್ಮ ಅವರ 'ಕಾವ್ಯಚಿತ್ರ', ವಿದುಷಿ ಜಯರಾಂ ಅವರ 'ಕಾವ್ಯ ವಾಚನ', ಅರೆಯರ್ ರಾಮ ಶರ್ಮ ಅವರ ನಿರೂಪಣೆ ಚೇತೋಹಾರಿಯಾಗಿತ್ತು.

ಪು.ತಿ.ನ. ಪುಣ್ಯಸ್ಮರಣೆಯ ವಿಚಾರಸಂಕಿರಣ ನಡೆದು ಹತ್ತೊಂಬತ್ತು ವರ್ಷಗಳಾದರೂ ಅಂದು ಸಾಹಿತ್ಯ ದಿಗ್ಗಜರ ಮಧ್ಯೆ ಪ್ರಬಂಧ ಮಂಡಿಸಿ ಅವರಿಂದ ಮೆಚ್ಚುಗೆ ಗಳಿಸಿದ್ದ ಘಟನೆ ಇನ್ನೂ ನನ್ನ ಮನದಲ್ಲಿ ಹಸಿರಾಗಿದೆ. ■